**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA)**

**ಪ್ರಾಜೆಕ್ಟ್ 560 ಅಡಿಯಲ್ಲಿ**

**ಸಂಗ್ರಹಾತ್ಮಕ ಕಲಾ ಒಡನಾಟಗಳ ಯೋಜನೆಗಳಿಗೆ (ಕ್ಯುರೇಟೆಡ್ ಆರ್ಟಿಸ್ಟಿಕ್ ಎಂಗೇಜ್‌ಮೆಂಟ್) ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ**

**ಪ್ರಸ್ತಾವನೆಗಳನ್ನು ವರ್ಷದಲ್ಲಿ ಯಾವಾಗ ಬೇಕಾದರೂ ಕಳಿಸಬಹುದು**

**********

ಫುಟ್‌ಬಾಲ್ ಆಟವನ್ನು ಸೃಜನಾತ್ಮಕ ಅಭಿವ್ಯಕ್ತಿಯಾಗಿ ನೋಡುವಂತಹ ಕಲಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸುವ ಕ್ರೀಡಾ ತರಬೇತುದಾರನ ಕಲ್ಪನೆಗಳು, ತಮ್ಮ ಹತ್ತಿರದ ಪಾರ್ಕುಗಳಲ್ಲಿ ನಗರ ಪರಿಸರದ ಕಥೆಗಳನ್ನು ಹೇಳುವ ಪರಿಸರ ಪ್ರೇಮಿಗಳ ಗುಂಪು, ಕಲಾವಿದರು, ಸಂಶೋಧಕರ ಗುಂಪು, ವೃತ್ತಿನಿರತ ಮಹಿಳೆಯರ ಅಂಕಿ-ಅಂಶಗಳನ್ನು ಕಾವ್ಯಾತ್ಮಕ ಅಭಿವ್ಯಕ್ತಿಯಾಗಿಸುವ ಪ್ರಯತ್ನಗಳು, ವಲಸೆ ಕಾರ್ಮಿಕರ ಮನಸ್ಸಿನ ಮನೆಯ ಕುರಿತಾದ ಭಾವನೆಗಳನ್ನು ಸಂಗೀತದ ಮೂಲಕ ಅಭಿವ್ಯಕ್ತಿಸಲು ನೆರವಾಗುವ ವಕೀಲರ ತಂಡ, ಒಂದು ನಗರವನ್ನು ರೂಪಿಸುವ ಹಲವು ನಿರೂಪಣೆಗಳೊಂದಿಗೆ ಅದರ ಭೂತ, ವರ್ತಮಾನ ಹಾಗೂ ಭವಿಷ್ಯಗಳೊಂದಿಗೆ ಸಂಭಾಷಿಸುವ ವರ್ಣಮಯ ಬೆಂಗಳೂರಿನ ಕಲ್ಪನೆಯೊಂದನ್ನು ಸೃಷ್ಟಿಸಿ, ನಗರದ ಹೋರಾಟ, ವಿಜ್ಞಾನ, ಪರಿಸರ, ಶಿಕ್ಷಣ, ನಗರೀಕರಣ, ತಂತ್ರಜ್ಞಾನ, ಭಾಷೆಗಳು ಮತ್ತು ಸಮುದಾಯಗಳ ನಡುವೆ ಪರಸ್ಪರ ಸಂವಾದವನ್ನು ಸಾಧ್ಯವಾಗಿಸುವ ಸೃಜನಶೀಲ ವೇದಿಕೆಯನ್ನು ಕಟ್ಟುವಂತಹ ಆಲೋಚನೆಗಳಿಗೆ ಐ.ಎಫ್.ಎ ಸಂಸ್ಥೆಯು ಬೆಂಗಳೂರಿನ ವಾಸಿಗಳಿಗೆ ಸಂಗ್ರಹಾತ್ಮಕ ಕಲಾ ಒಡನಾಟಗಳ ಯೋಜನೆಗಳಿಗೆ (ಕ್ಯುರೇಟೆಡ್ ಆರ್ಟಿಸ್ಟಿಕ್ ಎಂಗೇಜ್‌ಮೆಂಟ್) ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ. ಈ ಯೋಜನೆಗಳು ಬೆಂಗಳೂರನ್ನು ಪ್ರತಿಬಿಂಬಿಸುವ ಹಲವಾರು ಕಲ್ಪನೆಗಳನ್ನು ಒಳಗೊಂಡಿರಬೇಕು. ಇವುಗಳಲ್ಲಿ ಕಥನಗಳು, ಸಂಗೀತ, ಪ್ರದರ್ಶನಗಳು, ವಸ್ತು ಪ್ರದರ್ಶನಗಳು, ಇನ್‌ಸ್ಟಲೇಷನ್‌ಗಳು, ಆಟಗಳು, ಉಪನ್ಯಾಸಗಳು, ಸಾರ್ವಜನಿಕ ಚರ್ಚೆಗಳು ಮತ್ತು ಇತರೆ ಹೊಸ ಆಯಾಮಗಳ ಒಳನೋಟಗಳನ್ನು ಅಭಿವ್ಯಕ್ತಿಸಬಹುದು. ಈ ಮೂಲಕ ನಗರದ ಕಲೆ ಮತ್ತು ಸಂಸ್ಕೃತಿಯನ್ನು ಹೊಸ ರೂಪಗಳಲ್ಲಿ ಕಟ್ಟಿಕೊಳ್ಳಬೇಕು. ಈ ಸಂಗ್ರಹಾತ್ಮಕ ಒಡನಾಟಗಳ ಪ್ರಸ್ತುತಿಯು ಸಾರ್ವಜನಿಕವಾಗಿರಬೇಕು ಮತ್ತು ಭೌತಿಕ ಸ್ವರೂಪದಲ್ಲಿರಬೇಕು ಹಾಗೂ ಅಗತ್ಯವಿದ್ದಲ್ಲಿ ಮಾತ್ರ ವರ್ಚುವಲ್ ಅಂಶಗಳನ್ನು ಒಳಗೊಳ್ಳಬೇಕು. (ಪೂರ್ಣ ಪ್ರಮಾಣದ ವರ್ಚುವಲ್ ಪ್ರಸ್ತುತಿಗಳನ್ನು ನಾವು ಪ್ರೋತ್ಸಾಹಿಸುವುದಿಲ್ಲ)

**ಯೋಜನೆಯ ಅವಧಿ:** 12 ತಿಂಗಳುಗಳ ಅವಧಿಯಲ್ಲಿ 8–10 ಚಟುವಟಿಕೆಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಬೇಕು.

**ಬಜೆಟ್:** ಗರಿಷ್ಠ 5 ಲಕ್ಷ ರೂ. ಉದ್ದೇಶಿತ ಬಜೆಟ್‌ನ 35% ಕ್ಕಿಂತ ಹೆಚ್ಚಿಲ್ಲದ ಗೌರವಧನಕ್ಕಾಗಿ ನೀವು ವಿನಂತಿಸಬಹುದು

**ಪ್ರಸ್ತಾವನೆಗಳನ್ನು ವರ್ಷದಲ್ಲಿ ಯಾವಾಗ ಬೇಕಾದರೂ ಕಳಿಸಬಹುದು**

**ಯಾರು ಅರ್ಜಿ ಸಲ್ಲಿಸಬಹುದು?**

ಸ್ವತಂತ್ರ ಸಂಗ್ರಾಹಕರು, ಕ್ಯುರೇಟರ್‌ಗಳು ಮತ್ತು ಕಲಾವಿದರು ಅರ್ಜಿಸಲ್ಲಿಸಬಹುದು. ಈ ಯೋಜನೆಯನ್ನು ಒಂದು ವರ್ಷ ನಿರ್ವಹಿಸಬಲ್ಲ ಬೆಂಗಳೂರಿನ ಸಾರ್ವಜನಿಕ ಸಂಸ್ಥೆಯ ಭಾಗವಾಗಿರುವ ವೈಯುಕ್ತಿಕ ವ್ಯಕ್ತಿಗಳು ಕೂಡ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಬೆಂಗಳೂರಿನ ನಿವಾಸಿಗಳಾಗಿರಬೇಕು ಮತ್ತು ಯೋಜನೆಯನ್ನು ಬೆಂಗಳೂರಿನಲ್ಲಿಯೇ ಹಮ್ಮಿಕೊಳ್ಳಬೇಕು.

**ಅರ್ಹತೆ:**

ನೀವು ಭಾರತೀಯ ಪ್ರಜೆಯಾಗಿದ್ದರೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹರು. ನಿಮ್ಮ ಸಹಯೋಗಿಗಳು ಸಹಿತ ಭಾರತೀಯ ಪ್ರಜೆಗಳಾಗಿರಬೇಕು. ವಿವರಗಳಿಗಾಗಿ ದಯವಿಟ್ಟು **ಇಲ್ಲಿ ಕ್ಲಿಕ್ ಮಾಡಿ.**

**ಯೋಜನೆಯ ಪ್ರಸ್ತಾವನೆಗಳನ್ನು ಹೇಗೆ ಕಳುಹಿಸುವುದು?**

ಈ ಕೆಳಗಿನ ವಿವರಗಳೊಂದಿಗೆ ನಮಗೆ ಪ್ರಸ್ತಾವನೆಯನ್ನು ಕಳುಹಿಸಿ:

- ನೀವು ಪ್ರಸ್ತುತ ನಡೆಸುತ್ತಿರುವ ಸಂಗ್ರಹ ಕಾರ್ಯ/ಕಲಾ ಅಭ್ಯಾಸ ಮತ್ತು ಬೆಂಗಳೂರಿನ ಕುರಿತಾದ ನಿಮ್ಮ ಕಾಳಜಿಗಳು
- ಯೋಜನೆಯ ಕಲ್ಪನೆ, ಕಾರ್ಯ ವಿಧಾನದ ಯೋಜನೆ, ನಿಮ್ಮ ಕಾರ್ಯದ ಭಾಗವಾಗುವ ವ್ಯಕ್ತಿಗಳ ಹಾಗೂ ಸ್ಥಳಗಳ ವಿವರಗಳು
- ಕಾಲಾನುಸಾರ ವಿವರಗಳು ಮತ್ತು ಬಜೆಟ್

**ಪ್ರಸ್ತಾವನೆಗಳೊಂದಿಗೆ ಇವುಗಳನ್ನು ಸೇರಿಸಿ**

- ನಿಮ್ಮ ಹಿಂದಿನ ಕೆಲಸದ ಬರವಣಿಗೆಗಳು, ಛಾಯಾಚಿತ್ರಗಳು, ಆಡಿಯೋ/ವೀಡಿಯೋ ರೆಕಾರ್ಡಿಂಗ್‌ಗಳಂತಹ ಪೋಷಕ ಸಾಮಗ್ರಿಗಳು
- ನಿಮ್ಮ ಅಂಚೆ ವಿಳಾಸ, ದೂರವಾಣಿ ಸಂಖ್ಯೆಗಳು ಮತ್ತು ಇ-ಮೇಲ್ ವಿಳಾಸ ಸೇರಿದಂತೆ ಇತ್ತೀಚಿನ ಬಯೋಡೇಟ

ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ನಿಮ್ಮ ಪ್ರಸ್ತಾವನೆಯನ್ನು ಬರೆಯಲು ನೀವು ಆಯ್ಕೆ ಮಾಡಬಹುದು. ನಿಮ್ಮ ಪ್ರಸ್ತಾವನೆಗಳನ್ನು ನಮಗೆ ಕಳುಹಿಸುವ ಮೊದಲು ಯೋಜನಾ ವಿಚಾರಗಳನ್ನು ನಮ್ಮೊಂದಿಗೆ ಚರ್ಚಿಸಲು ಬಯಸಿದರೆ ಕಾರ್ಯಕ್ರಮ ನಿರ್ವಾಹಕರಾದ ಹರ್ಷಿತ ಬಟ್ವಾಳ್ ರವರಿಗೆ ಕರೆ ಮಾಡಬಹುದು ಅಥವಾ ಇಮೇಲ್ ಬರೆಯಬಹುದು. ನಿಮ್ಮ ಅಂತಿಮ ಪ್ರಸ್ತಾವನೆಯನ್ನು ಎಲ್ಲಾ ಮಾಹಿತಿಗಳೊಂದಿಗೆ, 25 ಎಂ.ಬಿ ಮೀರದ ಒಂದೇ ಇಮೇಲ್‌ನಲ್ಲಿ harshita@indiaifa.org ಸಲ್ಲಿಸಬೇಕು. ಅಪೂರ್ಣ ಪ್ರಸ್ತಾವನೆಗಳು ಮತ್ತು ಅರ್ಹತಾ ಮಾನದಂಡಗಳ ವ್ಯಾಪ್ತಿಗೆ ಬರದಿರುವ ಅರ್ಜಿದಾರರನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.

**ಆಯ್ಕೆ ಪ್ರಕ್ರಿಯೆ:**

ನೀವು ನಿಮ್ಮ ಕರಡು ಪ್ರಸ್ತಾವನೆಗಳನ್ನು ನಮ್ಮೊಂದಿಗೆ ಚರ್ಚಿಸಬಹುದು. ಆಯ್ದ ಪ್ರಸ್ತಾವನೆಗಳು ಆಂತರಿಕ ಹಾಗೂ ಬಾಹ್ಯ ಮೌಲ್ಯಮಾಪನಕ್ಕೆ ಒಳಪಡುತ್ತವೆ. ಬಾಹ್ಯ ತಜ್ಞರ ಸಲಹೆಯ ಮೇರೆಗೆ ಯೋಜನೆಗಳ ಆಯ್ಕೆ ನಡೆಯುತ್ತದೆ. ಯೋಜನೆಗಳ ಕುರಿತು ಐ.ಎಫ್.ಎ ನಿರ್ಧಾರವೇ ಅಂತಿಮವಾಗಿರುತ್ತದೆ.

**ದಯವಿಟ್ಟು ಗಮನಿಸಿ:** ಐ.ಎಫ್.ಎ ಸಂಸ್ಥೆಯು ಸುರಕ್ಷಿತ ವಾತಾವರಣವನ್ನು ಸೃಷ್ಟಿಸಲು ಬದ್ಧವಾಗಿದೆ. ನಮ್ಮ ಸಂಸ್ಥೆಯು ಮಕ್ಕಳು ಸೇರಿದಂತೆ ಪ್ರತಿಯೊಬ್ಬರ ಗೌರವಗಳನ್ನು ಬೆಂಬಲಿಸುತ್ತದೆ ಮತ್ತು ರಕ್ಷಿಸುತ್ತದೆ. ಅರ್ಜಿದಾರರು ಇದರೊಂದಿಗೆ ಹೊಂದಿಕೆಯಾಗಬೇಕು ಮತ್ತು ಅದನ್ನು ಎಲ್ಲ ಸಮಯದಲ್ಲೂ ಎತ್ತಿ ಹಿಡಿಯಬೇಕು.

**ಪ್ರಾಜೆಕ್ಟ್ 560 ಕುರಿತು**

ಪ್ರಾಜೆಕ್ಟ್ 560 ಈ ಯೋಜನೆಯನ್ನು ಐ.ಎಫ್.ಎ ಸಂಸ್ಥೆಯು ಬೆಂಗಳೂರಿಗೆ ವಿಶೇಷವಾಗಿ ಹಮ್ಮಿಕೊಂಡದ್ದಾಗಿದೆ. ಬೆಂಗಳೂರಿನ ಪಿನ್‌ಕೋಡ್‌ನ ಮೊದಲ ಮೂರು ಸಂಖ್ಯೆಗಳನ್ನು ಬಳಸಿಕೊಂಡು ಈ ಯೋಜನೆಯನ್ನು ಹೆಸರಿಸಲಾಗಿದೆ. ಪ್ರಾಜೆಕ್ಟ್ 560 ಯೋಜನೆಯು ಕಲಾವಿದರು, ಮೇಧಾವಿಗಳು, ಸಂಘ–ಸಂಸ್ಥೆಗಳು, ನೆರೆಹೊರೆಯವರೊಂದಿಗೆ ಕ್ರಿಯಾತ್ಮಕವಾಗಿ ಒಡನಾಡುವಂತೆ ಬಯಸುತ್ತದೆ. ಇದರ ಗುರಿ ಜನರಿಗೆ ನಗರದ ವಿಭಿನ್ನ ಅನುಭವಗಳನ್ನು ವಿವಿಧ ಆಯಾಮಗಳಲ್ಲಿ ಅನ್ವೇಷಿಸುವಂತೆ ಮಾಡುವುದಾಗಿದೆ ಹಾಗೂ ನಗರ ಜೀವನವನ್ನು ಸಂಬಂಧಗಳೊಂದಿಗೆ ಹೊಸ ಬಗೆಗಳಲ್ಲಿ ಉತ್ಸಾಹದಿಂದ ಕಲ್ಪಿಸಿಕೊಳ್ಳಲು ಸಾಧ್ಯ ಮಾಡುವುದಾಗಿದೆ.

**ನಮ್ಮ 560. ನಮ್ಮ ಯೋಜನೆ. ನಮ್ಮ ಪಿನ್‌ಕೋಡ್**

2023–24 ನೇ ಸಾಲಿನ ಪ್ರಾಜೆಕ್ಟ್ 560 ಯೋಜನೆಯನ್ನು ಸೋನಿ ಪಿಕ್ಚರ್ಸ್ ಎಂಟರ್ಟೈನ್ಮೆಂಟ್ ಫಂಡ್ ಮತ್ತು ಬಿ.ಎನ್.ಪಿ ಪರಿಬಾಸ್ ಇಂಡಿಯಾ ಬೆಂಬಲಿಸುತ್ತದೆ.